ಏನೋ ಬಾನಗಡಿ ಮಾಡಿರಬೇಕು' ಎಂದು ಇವಳ ಮೇಲೆ ಆರೋಪ ಹೊರಿಸಿದಳು! ಹಿರಿಯರ ಈ ರೀತಿಯ ವರ್ತನೆ ಇನ್ನಷ್ಟು ಆಘಾತ ಕೊಡುತ್ತದೆ. ತನ್ನದೇ ದೋಷವೆಂದು ಭ್ರಮೆಯಾಗುತ್ತದೆ. ಸರಿಯಾಗಿ ನಿರ್ವಹಿಸದಿದ್ದರೆ ಒಂದು ಆಘಾತವು ಒಬ್ಬರ ಬದುಕಿನ ನೆಮ್ಮದಿಯನ್ನೇ ಹಾಳುಮಾಡಬಲ್ಲುದು. ಉದಾಹರಣೆಗಾಗಿ, ನನಗೆ ಗೊತ್ತಿರುವ ವಿದ್ಯಾರ್ಥಿನಿಯೊಬ್ಬಳು ಅವರ ಪ್ರಾಧ್ಯಾಪಕರಿಂದ ಅತ್ಯಾಚಾರಕ್ಕೆ ಒಳಗಾಗಿ, ಅಲ್ಲಿಂದ ತಾಯ್ತಂದೆಯರಿಂದ ತಿರಸ್ಕೃತಳಾಗಿ ಎಷ್ಟು ಜರ್ಜರಿತ ಆಗಿದ್ದಾಳೆ ಎಂದರೆ ನನ್ನ ಕಾರ್ಯಾಗಾರದಲ್ಲಿ ಪರಿಚಯಸ್ಥ ಸ್ತ್ರೀಪುರುಷರು ಪರಸ್ಪರ ಹಾರ್ದಿಕವಾಗಿ ತಬ್ಬಿಕೊಳ್ಳುವುದನ್ನು ನೋಡಿ ದಿಗ್ಭ್ರಮೆಗೊಂಡು ಹೊರಟುಬಿಡಲು ತಯಾರಾದಳು! ಇಲ್ಲಿ ಹಿರಿಯರಿಗೆ ಕಿವಿಮಾತು: ನಿಮ್ಮ ಮಕ್ಕಳು ಅತ್ಯಾಚಾರಕ್ಕೆ ಒಳಗಾಗಿರುವುದನ್ನು ಹೇಳಿಕೊಂಡರೆ ನಂಬಿ. ಅವರನ್ನು ಆರೋಪಿಸಿದರೆ ಅಥವಾ ಶಿಕ್ಷಿಸಿದರೆ ಅವರ ಭಾವೀ ಲೈಂಗಿಕ ಬದುಕನ್ನು ನಾಶ ಮಾಡಿದಂತೆ! ಬದಲಾಗಿ ಅವರನ್ನು ತಬ್ಬಿಕೊಂಡು ನಿನ್ನ ತಪ್ಪಲ್ಲ ಎಂದು ಸಾಂತ್ವನ ಹೇಳಿ. ಅಗತ್ಯವಾದರೆ ವೈದ್ಯಕೀಯ ಹಾಗೂ ಕಾನೂನಿನ ನೆರವು ಪಡೆಯಿರಿ. ತಪ್ಪದೆ ಕೂಡಲೇ ಆಪ್ತಸಲಹೆ, ಮನೋಚಿಕಿತ್ಸೆ ಕೊಡಿಸಿ.

## ಸಂಗಾತಿಯ ಮನಃಸ್ಥಿತಿ

ಅತ್ಯಾಚಾರಕ್ಕೆ ಒಳಗಾದ ಹೆಣ್ಣನ್ನು ಮದುವೆಯಾದವನು ಹೆಚ್ಚಿನಂಶ ಆಕೆಗೆ ಅನುಗ್ರಹ ಮಾಡುವಂತೆ ವರ್ತಿಸುತ್ತಾನೆ. ಆಗ ಹೆಂಡತಿಯೇ ಮದುವೆ ಮುರಿದುಕೊಂಡಿದ್ದು ಕಂಡಿದ್ದೇನೆ. ಅತ್ಯಾಚಾರಕ್ಕೆ ಒಳಗಾದ ಸಂಗಾತಿಯ ನೋವಿಗೆ ಹೇಗೆ ಸ್ಪಂದಿಸಬೇಕು ಎನ್ನುವುದು ಗಂಡಸರಿಗೆ ಗೊತ್ತಾಗುವುದಿಲ್ಲ. 'ದಿ ಸೇಲ್ಸ್‌ಮನ್' (The Salesman) ಎಂಬ ಇರಾನಿ ಚಿತ್ರ ನೆನಪಾಗುತ್ತಿದೆ. ದಂಪತಿಯು ಹೊಸದಾಗಿ ಬಾಡಿಗೆ ಮನೆಯಲ್ಲಿ ಕಾಲೂರುತ್ತಿರುವಾಗಲೇ ಹೆಂಡತಿಯ ಮೇಲೆ ಬಚ್ಚಲುಮನೆಯಲ್ಲಿ ಅತ್ಯಾಚಾರ ನಡೆಯುತ್ತದೆ. ಪೊಲೀಸರಲ್ಲಿ ಹೋಗದೆ ಮರೆಸಿಹಾಕಲು ನಿರ್ಧರಿಸುತ್ತಾರೆ. ಭಯಭೀತಳಾದವಳಿಗೆ ಬಚ್ಚಲಿಗೆ ಹೋಗುವಾಗ ಗಂಡ ಬಾಗಿಲ ಹೊರಗೆ ನಿಂತಿರಬೇಕು. ಆತನಿಗೆ ಕೆಲಸಕ್ಕೆ ಹೋಗಲೂ ಆಕೆ ಬಿಡುವುದಿಲ್ಲ. ರಾತ್ರಿ ಅವನು ಹತ್ತಿರವಾಗಲು ಯತ್ನಿಸಿದಾಗ ದೂರವಿರಿಸುತ್ತಾಳೆ. ಆಗವನು ಹೇಳುತ್ತಾನೆ: 'ಹಗಲು ದೂರ ಹೋಗಲು ಬಿಡುವುದಿಲ್ಲ, ರಾತ್ರಿ ಹತ್ತಿರ ಬರಲು ಬಿಡುವುದಿಲ್ಲ. ನಿನ್ನನ್ನು ನಾನು ಹೇಗೆ ಅರ್ಥಮಾಡಿಕೊಳ್ಳಲಿ?' ಇದೊಂದೇ ಮಾತಿನಲ್ಲಿ ಅತ್ಯಾಚಾರಕ್ಕೆ ಒಳಗಾದವರ ಸಂಗಾತಿಯ ಸಂಕಟವನ್ನು ಅರ್ಥಮಾಡಿಕೊಳ್ಳಬಹುದು. ಒಂದು ಅತ್ಯಾಚಾರವು ದಾಂಪತ್ಯದ್ದಷ್ಟೇ ಅಲ್ಲ, ಇಡೀ ಕುಟುಂಬದ ಸುಖದ ದಾರಿಯನ್ನು ತಪ್ಪಿಸಿ ನರಕಕ್ಕೆ ತಳ್ಳುತ್ತದೆ!

## ನಾ ಕಂಡ ಪ್ರಕರಣಗಳು

ಅತ್ಯಾಚಾರ ಎದುರಿಸಿ ಬದುಕಿಬಂದವರನ್ನು ಸಾಕಷ್ಟು ಸಂಖ್ಯೆಯಲ್ಲಿ ಕಂಡಿದ್ದೇನೆ. ಇತ್ತೀಚಿನ ಎರಡು ದೃಷ್ಟಾಂತವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ.

ಈ ಹುಡುಗಿ ಚಿಕ್ಕವಳಿರುವಾಗ ಆಕೆಯ ಚಿಕ್ಕಪ್ಪನೇ ಮೂರು ವರ್ಷಗಳ ಕಾಲ ಅತ್ಯಾಚಾರ ಮಾಡುತ್ತಿದ್ದ. ಅಷ್ಟಲ್ಲದೆ, 'ಹಿರಿಯರಿಗೆ ಹೇಳಿದರೆ ಅವರು ನನ್ನನ್ನು ಜೈಲಿಗೆ ಹಾಕುತ್ತಾರೆ. ಅದು ನಿನಗೆ ಬೇಕೆ? ನನ್ನನ್ನು ಜೈಲಿನಿಂದ ತಪ್ಪಿಸುವ ಹೊಣೆ ನಿನ್ನದು' ಎಂದು ಕಿಶೋರಿಯ ಮೇಲೆ ಭಾವನಾತ್ಮಕ ಒತ್ತಡವನ್ನೂ ಹೇರುತ್ತ ಜರ್ಜರಿತಗೊಳಿಸುತ್ತಿದ್ದ. ಅವಳ ಎಳೆಯ ಶರೀರ ಹಾಗೂ ಮನಃಸ್ಥಿತಿ ಎಷ್ಟೊಂದು ಗಾಸಿಗೊಂಡಿರಬೇಡ? ಪರಿಣಾಮವಾಗಿ ಕಾಮಕ್ರಿಯೆಯನ್ನೂ ಗಂಡಿನ ಶಿಶ್ನವನ್ನೂ ದ್ವೇಷಿಸುತ್ತ ಆಕೆ ಹದಿನೆಂಟು ಮುಟ್ಟಿದಳು. ಕೊನೆಗೂ ತಾಳದೆ ಹೆತ್ತವರ ಮುಂದೆ ಬಾಯಿಬಿಟ್ಟಳು. ಆಘಾತಗೊಂಡ ಅವರು ತಕ್ಷಣ ಅಪರಾಧಿಯ ಮೇಲೆ ಕ್ರಮ ಕೈಗೊಂಡರಲ್ಲದೆ ಹುಡುಗಿಗೆ ಸಾಂತ್ವನ ನೆರವು ನೀಡುತ್ತ ಚಿಕಿತ್ಸೆಗಾಗಿ ನನ್ನಲ್ಲಿ ಕರೆತಂದರು. ಸಾಕಷ್ಟು ಕಾಲ ಮನೋಚಿಕಿತ್ಸೆಯ ಪರಿಣಾಮದಿಂದ ಈಗ ಸರಿಹೋಗುತ್ತ ನಗುತ್ತಿದ್ದಾಳೆ. ಅಷ್ಟಾದರೂ ಮೊನ್ನೆ ತಾನು ಪ್ರೀತಿಸುವ ಹುಡುಗನನ್ನು ತಬ್ಬಿಕೊಂಡಾಗ ಆತನ ಬಿಸಿಯುಸಿರು ಆಕೆಯ ಕುತ್ತಿಗೆಗೆ ತಾಗಿದಾಗ ಬೆಚ್ಚಿಬಿದ್ದು ದೂರ ಸರಿದಿದ್ದನ್ನು ಹೇಳಿಕೊಂಡಳು.

ಇನ್ನೊಂದು ಪ್ರಕರಣದಲ್ಲಿ ಇಪ್ಪತ್ತೊಂದರ ಚೆಲುವೆ ಕಾಲೇಜಿನ ವಾರ್ಷಿಕೋತ್ಸವ ಮುಗಿಸಿ ಬಸ್ಸಿನಲ್ಲಿ ತಡಸಂಜೆಗೆ ಕುಳಿತು ತೂಕಡಿಸಿದಳು. ಕಂಡಕ್ಟರ್ ಎಬ್ಬಿಸಿದಾಗ ಕಂಡಿದ್ದು ನಡುರಾತ್ರಿ ಹಾಗೂ ಕೊನೆಯ ನಿಲ್ದಾಣ. ಏನೂ ತಿಳಿಯದೆ ಗೊಂದಲದಲ್ಲಿ ತಿರುಗುತ್ತಿದ್ದಾಗ ಮೂವರು ಕತ್ತಲ ರಕ್ಕಸರು ಆಕೆಯನ್ನು ಸಮೀಪಿಸಿದರು. 'ಅವರು ನನ್ನನ್ನು ಕೆಳಗೆ ಹಾಕಿ ತಮಗೆ ಏನು ಬೇಕೋ ಅದನ್ನು ಮಾಡಿಕೊಂಡರು' ಎಂದು ನಿರ್ಭಾವುಕವಾಗಿ ಹೇಳುತ್ತಿರುವಾಗ ಆಕೆಯ ಮುಖಭಾವವು ದೇಹತ್ಯಾಗ ಮಾಡಿದಂತಿತ್ತು. ಅವಳ ದೇಹಾನುಭೂತಿ ನನ್ನಲ್ಲಿ ಅನುರಣಿಸಿ ನಾನೇ ಸ್ವತಃ ಅತ್ತುಬಿಟ್ಟೆ. ಆಗ ಆಕೆ ಸ್ವಲ್ಪ ಮೃದುವಾಗಿ ಕಣ್ಣುಗಳು ಒದ್ದೆಯಾದುವು, ಅಷ್ಟೆ. ಇವಳಿಗೆ ಮದುವೆಯಾಗಿ ಹಲವು ವರ್ಷಗಳಾಗಿವೆ. ಗಂಡ ಕೂಟಕ್ಕೆ ಬಂದಾಗ ಒಳಚಡ್ಡಿಯನ್ನು ಭದ್ರವಾಗಿ ಧರಿಸಿರುತ್ತಾಳೆ. 'ಅವನು ತನಗೆ ಬೇಕಾದಾಗ ನನ್ನಮೇಲೆ ಬಂದು ಕುಪ್ಪಳಿಸುತ್ತಾನೆ. ದಾಂಪತ್ಯದಲ್ಲಿ ಇರಲಿಕ್ಕೋಸ್ಕರ ಈ ಅನಿವಾರ್ಯತೆಯನ್ನು ಸಹಿಸುತ್ತಿದ್ದೇನೆ' ಎಂದು ತಟಸ್ಥವಾಗಿ ಹೇಳಿದಳು. ಅತ್ಯಾಚಾರಕ್ಕೂ ಮುಂಚೆ ಹುಡುಗನೊಂದಿಗೆ ಕಾಮ–ಪ್ರೇಮವನ್ನು ಅನುಭವಿಸಿದ ಈಕೆಗೆ ಆಘಾತೋತ್ತರ ಕಾಮವು ಸತ್ತುಹೋಗಿದೆ. ಇವಳ ಚಿಕಿತ್ಸೆಯನ್ನು ನಡೆಸಿದ್ದೇನೆ. ಪರಿಣಾಮ ಕಾದು ನೋಡಬೇಕು.

ಕೊನೆಯ ಮಾತು: ಎಲ್ಲ ಗಂಡು ಪ್ರಾಣಿಗಳೂ ತಮ್ಮ ಹೆಣ್ಣನ್ನು ಸಂಭೋಗಕ್ಕೆ ಬಲವಂತ ಮಾಡುತ್ತವೆ ಅಷ್ಟೆ; ಮಾನವ ಗಂಡು ಮಾತ್ರ ಲೈಂಗಿಕ ಕ್ರಿಯೆಯನ್ನು ಹಿಂಸೆಯ, ದಬ್ಬಾಳಿಕೆಯ ಅಸ್ತ್ರವನ್ನಾಗಿ ಬಳಸುತ್ತಾನೆ. ದ್ರೌಪದಿಯ ವಸ್ತ್ರಾಪಹರಣ, ಮೃಚ್ಛಕಟಿಕ ನಾಟಕದ ಶಕಾರ, ಐಎಸ್‌ಐಎಸ್ ಉಗ್ರವಾದಿಗಳಿಂದ ಸೆರೆಹೆಣ್ಣುಗಳನ್ನು ಬಸಿರು ಮಾಡುವ ಯೋಜನೆ, ನಿರ್ಭಯಾಳ ಕತೆ–ಕರುಳು... ಇದೆಲ್ಲ ಕೇಳುವಾಗ ನನಗೆ ಏನೆನ್ನಿಸುತ್ತದೆ? ಮಾನವರು ಮುಟ್ಟಲಾಗದ ಶಾಂತಸಾಗರದ ಆಳದಲ್ಲಿ ಒಂದು ಕಡೆ ಡಾಲ್ಫಿನ್ ಆಗಿ ಹುಟ್ಟಿದ್ದರೆ ಚೆನ್ನಾಗಿರುತ್ತಿತ್ತು!

## ಚಿಕಿತ್ಸೆ ಹೇಗೆ?

ಅತ್ಯಾಚಾರಕ್ಕೆ ಒಳಗಾದವರಿಗೆ ಹೊರಬರಲು ಮನೋವೈಜ್ಞಾನಿಕ ಚಿಕಿತ್ಸೆಯಿದೆ. ಇದರಲ್ಲಿ ಆಕೆಯ ನಿಷ್ಪಾಪಿತನವನ್ನು ಅರಿವು ಮಾಡಿಕೊಟ್ಟು ಆಕೆ ಪರಿಶುದ್ಧಳಾಗಿದ್ದಾಳೆ ಎಂದು ಪ್ರತಿಬಿಂಬಿಸಲಾಗುತ್ತದೆ. ನಡೆದಿದ್ದು ಆಕೆಯ ತಪ್ಪಲ್ಲ, ತಪ್ಪು ಅತ್ಯಾಚಾರಿಯದು, ಹಾಗಾಗಿ ಆಕೆ ಹೊಣೆಗಾರಳಾಗಬೇಕಿಲ್ಲ. ಇನ್ನು, ಅನೇಕರಿಗೆ ಅತ್ಯಾಚಾರದ ಪ್ರಸಂಗದಲ್ಲಿ ಇಂಥದ್ದನ್ನು ಮಾಡಬೇಕಿತ್ತು, ಅಥವಾ ಅತ್ಯಾಚಾರಿಯನ್ನು ಹೀಗೆ ಎದುರಿಸಬೇಕಿತ್ತು, ಆದರೆ ಅದು ನೆರವೇರಲಿಲ್ಲ ಎಂಬ ತಪ್ಪಿತಸ್ಥ ಭಾವ ಕಾಡುತ್ತದೆ. ಅವರ ಈ ಅಪೂರ್ಣ ವ್ಯವಹಾರವನ್ನು ಪೂರ್ಣಗೊಳಿಸಲು ಪುನರ್‌ನಿರ್ಧಾರದ ಚಿಕಿತ್ಸೆಯಿದೆ (Redecision Therapy). ಇದು ಈ ಹಂತಗಳ ಮೂಲಕ ಸಾಗುತ್ತದೆ:

- ಪ್ರಸಂಗದ ಹಾಗೂ ವೈಯಕ್ತಿಕ ಮಾಹಿತಿ ಸಂಗ್ರಹ.
- ಚಿಕಿತ್ಸಕ ಹಾಗೂ ಸಲಹಾರ್ಥಿಯ ನಡುವೆ ನಂಬಿಕೆಯ ಬಾಂಧವ್ಯದ ಸ್ಥಾಪನೆ.
- ವಶೀಕರಣದ ಮೂಲಕ ಸಲಹಾರ್ತಿಯನ್ನು ಅತ್ಯಾಚಾರದ ಸನ್ನಿವೇಶಕ್ಕೆ ಕರೆದೊಯ್ಯುವುದು.
- ಅತ್ಯಾಚಾರಿಯನ್ನು ಎದುರಿಸಲು, ಶಿಕ್ಷಿಸಲು ಹಚ್ಚುವುದು, ತನ್ಮೂಲಕ ಮುಂಚೆ ಮಾಡಲು ಅಸಾಧ್ಯವಾದುದನ್ನು ಈಗ ಮಾಡಿಮುಗಿಸಲು ನೆರವು ನೀಡುವುದು.
- ವರ್ತಮಾನ ಕಾಲಕ್ಕೆ ಬಂದು ಪ್ರಸ್ತುತ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು.
- ಭವಿಷ್ಯದ ಬದುಕನ್ನು ಕಲ್ಪಿಸಿಕೊಳ್ಳಲು ನೆರವು ನೀಡುವುದು
- ಇಂದಿನಿಂದ ಹೊಸ ಬದುಕು ಪ್ರಾರಂಭಿಸಲು ಉತ್ತೇಜನ ನೀಡುವುದು.

ಲೇಖಕರ ಸಂಪರ್ಕ: 8494933888